ಕರ್ನಾಟಕ ವಿಧಾನ ಸಭೆ

ಗುರುವಾರ 5ನೇ ಮಾರ್ಚ್ 1992 ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-15 ಗಂಟೆಗೆ ಸಮಾವೇಶಗೊಂಡಿತು. ಅಧ್ಯಕ್ಷರು (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.

ಪ್ರಶ್ನೋತ್ತರ (ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:-- ಅಧ್ಯಕ್ಷರೆ, ಶ್ರೀ ಎಂ.ವಿ. ವೆಂಕಟಪ್ಪ , ಶ್ರೀ ಅಂಜನ ಮೂರ್ತಿ ಮತ್ತು ಶ್ರೀ ಸಾದತ್ ಅಲಿ ಖಾನ್‌ರವರ ಪ್ರಶ್ನೆಗಳು ಒಂದೇ ಉತ್ತರವೂ ಒಂದೇ ಆಗಿವೆ, ಆದ್ದರಿಂದ ಈ ಮೂರು ಪ್ರಶ್ನೆಗಳನ್ನು ಒಟ್ಟಿಗೆ ತೆಗೆದುಕೊಳ್ಳಬಹುದು.

ಬರಗಾಲ ಪರಿಹಾರ – ಬಿಡುಗಡೆ ಮಾಡಿದ ಹಣ

141 (152) ಶ್ರೀ ಅಂಜನಮೂರ್ತಿ (ನೆಲಮಂಗಲ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1990-91 ರಿಂದ ಇಂದಿನವರೆಗೆ ಬರ ಪರಿಹಾರ ಕಾಮಗಾರಿಗಳಿಗಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಬಿಡುಗಡೆಯಾದ ಒಟ್ಟು ಹಣದ ಮೊತ್ತವೆಷ್ಟು?

ಆ) ಹಾಗಿದ್ದಲ್ಲಿ, ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟು ಹಣ ಖರ್ಚಾಗಿದೆ, ಹಾಗೂ ಬಾಕಿ ಹಣ ಯಾವಾಗ ಬಿಡುಗಡೆಯಾಗಲಿದೆ? (ಪೂರ್ಣ ಮಾಹಿತಿ ನೀಡುವುದು)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):-

ಅ) 141.00 ಲಕ್ಷ ರೂಪಾಯಿಗಳು

ಆ) ಬಿಡುಗಡೆ ಮಾಡಬೇಕಾಗಿರುವ ಯಾವ ಹಣವೂ ಬಾಕಿ ಇರುವುದಿಲ್ಲ, ತಾಲ್ಲೂಕುವಾರು ವೆಚ್ಚದ ವಿವರಗಳು ಈ ಕೆಳಕಂಡತಿವೆ.

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು		ಉದ್ಯೋಗ ಸೃಜನೆ (ಲಕ್ಷ ರೂ.ಗಳಲ್ಲಿ)	ಕುಡಿಯುವ ನೀರಿನ ಸರಬರಾಜು ರೂ.
1	ಕನಕಪುರ		2.83	14,85,072.00
2	ಚನ್ನಪಟ್ಟಣ		2.85	18,61,620.00
3	ರಾಮನಗರ		2.73	16,18,292.00
4	ಮಾಗಡಿ		2.79	14,70,004.00
5	ನೆಲಮಂಗಲ		2.75	13,78,348.00
6	ದೊಡ್ಡಬಳ್ಳಾಪುರ		2.75	14,73,364.00
7	ದೇವನಹಳ್ಳಿ		2.75	12,78,300.00
8	ಹೊಸಕೋಟೆ		2.75	13,15,000.00
		ಒಟ್ಟು	22.20	1,18,80,000.00
		ಒಟ್ಟು		ರೂ.1,41,00,000.00